ಇಂಚು ಮಳೆಯಾಗತಕ್ಕಂಥ ಜಾಗದಲ್ಲಿ ಅರಣ್ಯ ಇಲಾಖೆಯವರು ನೀಲಗಿರಿ, ಅಕೇಶಿಯಾಗಳನ್ನು ಹಾಕುತ್ತಿದ್ದಾರೆ. ಅದನ್ನು ತಡೆಗಟ್ಟಬೇಕು. ಅರಳಿಮರ, ಆಲದಮರ, ಗೋಣಿ ಮರ, ಇಂಥ ಮರಗಳನ್ನು ಬೆಳೆಸಿದರೆ ಮಳೆ ಬರಲೂ ಅನುಕೂಲವಾಗುವುದರ ಜೊತೆಗೆ, ಪರಿಸರ ಕಾಪಾಡುವುದಕ್ಕೂ ಅನುಕೂಲವಾಗುತ್ತದೆ, ಪಕ್ಷಿ ಪ್ರಾಣಿಗಳಿಗೂ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಅರಣ್ಯ ಇಲಾಖೆಯವರು, ರೋಡ್ ಸೈಡ್‌ನಲ್ಲಿರುವಂಥ ಮರಗಳನ್ನು, ರೋಡಿಗೆ ಅಡ್ಡವಾಗುತ್ತವೆ ಎಂದು ಕಡಿಸುತ್ತಿದ್ದಾರೆ. ನಿಜವಾಗಿಯೂ ರೋಡಿಗೆ ಅಡ್ಡವಾಗುವಂಥ ಮರಗಳನ್ನು ಮಾತ್ರ ಕಡಿಸಬೇಕು. ಅವರ ಸ್ವಂತ ಉಪಯೋಗಕ್ಕೋಸ್ಕರ, ಅರಣ್ಯ ಇಲಾಖೆಯವರು ಸಂಬಂಧಪಟ್ಟವರಿಗೆ ಪರವಾನಗಿ ಕೊಟ್ಟು ಮರಗಳನ್ನು ಕಡಿಸತಕ್ಕಂಥಾದ್ದನ್ನು ನಿಲ್ಲಿಸಬೇಕು ಎನ್ನುವ ಮಾತನ್ನು ಹೇಳುತ್ತಾ, ಎರಡು ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನಮಸ್ಕರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಅಧ್ಯಕ್ಷರು: ಈಗ ಮಾಧುಸ್ವಾಮಿಯವರು.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಭಾಷಣ ಮಾಡುವುದಕ್ಕೆ ಮೊದಲೇ ನಮಗೆ ಬಹಳ ಬೇಸರವಾಗಿದೆ. ನಾನು ಮತ್ತು ಶ್ರೀರಾಮರೆಡ್ಡಿಯವರು ವಾಟಾಳ್ ನಾಗರಾಜರಿಗೆ ಎಡ ಮತ್ತು ಬಲದಲ್ಲಿ ಕುಳಿತುಕೊಂಡು, ಅವರಿಗೆ ಬಾಡಿಗಾರ್ಡ್‌ಗಳ ಹಾಗಿದ್ದು, ಅವರ ಎಲ್ಲಾ ತೀಟೆಗಳಿಗೆ, ತೆವಲಿಗೆ ಸ್ಪಂದಿಸುತ್ತಿದ್ದರೆ, ಇವತ್ತು ನಾವು ಮಾತನಾಡುತ್ತೇವೆ ಎಂದು ಬಂದರೆ, ಅವರು ಕಪ್ಪು ಬಟ್ಟೆ ಹಾಕಿಕೊಂಡು ಬಂದು ಕುಳಿತಿದ್ದಾರೆ. ಇದು ನ್ಯಾಯವೇ ಎಂದು ಅವರು ಮೊದಲು ಹೇಳಬೇಕು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ: ತಮಿಳುನಾಡಿನವರು ಕಾವೇರಿ ನೀರು ಬಿಡಬೇಕೆಂದು ರಾಜಕೀಯ ಮಾಡುತ್ತಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಾನು ಕಪ್ಪು ಬಟ್ಟೆ ಹಾಕಿಕೊಂಡು ಬಂದಿರುವುದು ಏಕೆಂದರೆ, ನಾನು ನಿಮ್ಮನ್ನು ಕೇಳಿದರೆ ನೀವು ಅವಕಾಶ ಕೊಡುವುದಿಲ್ಲ. ಆದ್ದರಿಂದ ನಾನು ಕಪ್ಪುಬಟ್ಟೆ ಹಾಕಿಕೊಂಡು ಬಂದಿರುವುದು ಏಕೆಂದು ನೀವೇ ಕೇಳಲಿ ಎಂದು ನಾನು ಕಪ್ಪುಬಟ್ಟೆ ಹಾಕಿಕೊಂಡು ಬಂದಿದ್ದೇನೆ. ಇವತ್ತು ತಮಿಳುನಾಡಿನಲ್ಲಿ ಎ.ಐ.ಎ.ಡಿ.ಎಂ.ಕೆ ಯವರು, ಡಿ.ಎಂ.ಕೆ. ಯವರು ಕರ್ನಾಟಕದ ವಿರುದ್ಧ, ಕರ್ನಾಟಕದ ರೈತರ ವಿರುದ್ಧ, ನಮಗೆ ಕರ್ನಾಟಕದ ನೀರು ಕೊಡಬೇಕೆಂದು ಹೇಳಿ, ವಿನಾಕಾರಣ ರಾಜಕೀಯ ಮಾಡುತ್ತಿದ್ದಾರೆ. ಈ ವಿಷಯವಾಗಿ ಡಿ.ಎಂ.ಕೆ. ಯವರು ಡೆಲ್ಲಿಗೆ ಹೋಗುವುದು, ಅವರು ಬಂದ ತಕ್ಷಣ ಎ.ಐ.ಎ.ಡಿ.ಎಂ.ಕೆ. ಯವರು ಡೆಲ್ಲಿಗೆ ಹೋಗುವುದು, ಇವರು ಬಂದ ತಕ್ಷಣ ಅವರು, ಅವರು ಬಂದ ತಕ್ಷಣ ಇವರು ಹೋಗಿ, ರಾಜಕೀಯ ಮಾಡುತ್ತಿದ್ದಾರೆ. ತಮಿಳುನಾಡಿಗೆ ನಾವು ಕಬಿನಿಯಿಂದ ಸಿಕ್ಕಾಪಟ್ಟೆ ನೀರು ಬಿಡುತ್ತಿದ್ದೇನೆ, ಸಿಕ್ಕಾಪಟ್ಟೆ ನೀರು ಹೋಗುತ್ತಿದೆ. ಈಗ ಅವರಿಗೆ ನೀರು ಬೇಕಾಗಿಲ್ಲ. ಅವರಿಗೆ ಬೇಕಾಗಿರತಕ್ಕಂಥಾದ್ದು ಚಳುವಳಿ. ಅವರಿಗೆ ಸಂಪೂರ್ಣವಾಗಿ ಬೇಕಾಗಿರತಕ್ಕಂಥಾದ್ದು ರಾಜಕೀಯ. ಆದ್ದರಿಂದ, ಅವರನ್ನು ವಿರೋಧಿಸಿ, ಆ ಚಳುವಳಿಯನ್ನು ವಿರೋಧಿಸಿ, ನಾನು ಕಪ್ಪು ಬಾವುಟವನ್ನು ಹಿಡಿದು ಸಭಾತ್ಯಾಗ ಮಾಡುತ್ತಿದ್ದೇನೆ.

ಮಾನ್ಯ ಸದಸ್ಯರು: ಅಲ್ಲಿ ಸ್ಟ್ರೈಕ್ ಮಾಡಿದರೆ, ಇಲ್ಲಿ ಸಭಾತ್ಯಾಗ ಮಾಡುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಇಲ್ಲಿ ತಮಿಳು ಪೇಪರ್‌ನವರು ಯಾರೂ ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಕಪ್ಪು ಬಟ್ಟೆ ಪಕ್ಕದಲ್ಲಿದ್ದರೆ ಮಾಧುಸ್ವಾಮಿಯವರಿಗೆ ಮಾತನಾಡಲು ಸ್ಫೂರ್ತಿ ಸಿಕ್ಕುವುದಿಲ್ಲ ಎಂದು . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾಧುಸ್ವಾಮಿಯವರು ಅವರಿಗೆ ಸಪೋರ್ಟ್ ಮಾಡಿ, ಅವರು ಪಾಪ ಸುಮ್ಮನೆ, ...

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರೇನಾದರೂ ತಮಿಳುನಾಡು ಅಸೆಂಬ್ಲಿಯಲ್ಲಿ ಕುಳಿತಿದ್ದಾರೆಯೇ? ನೀವೇನಾದರೂ ಅವರಿಗೆ ಜಯಲಲಿತಾ ಕಂಡಹಾಗೆ ಕಾಣುತ್ತಿರುವಿರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಅವರು ಡಿ.ಎಂ.ಕೆ. ಪಾರ್ಟಿ ಸೇರಿದ್ದಾರೆ. ಅವರು ಸುಖವಾಗಿ ಕುಳಿತಿದ್ದರು, ಕಣ್ಣು ಒರೆಸಿಕೊಂಡು . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಖರ್ಗೆಯವರನ್ನು ನೀವು ಜಯಲಲಿತಾರವರಿಗೆ ಹೋಲಿಸುವುದು ತಪ್ಪು. ಇಲ್ಲಿ ಯಾರೂ ಜಯಲಲಿತಾ ಇಲ್ಲ.

('ಯಾವುದೇ ಕಾರಣಕ್ಕೂ ತಮಿಳ್ನಾಡಿಗೆ ನೀರು ಬಿಡಕೂಡದು' ಎಂದು ಘೋಷಣೆಯನ್ನು ಕೂಗುತ್ತಾ, ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ರಾಜೇಂದ್ರನ್: ಇದು ತಮಿಳುನಾಡು ವಿರುದ್ಧ ಎಂದರೆ, ಮತ್ತೆ ತಮಿಳುನಾಡಿನವರನ್ನು ಪಬ್ಲಿಸಿಟಿ ಮಾಡಿದ ತರಹ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕಣ್ಣಿನಲ್ಲಿ ಧೂಳು ಬಿದ್ದಿದೆ ಎಂದು ಕಣ್ಣು ಒರೆಸಿಕೊಳ್ಳಲು ತಂದಂಥ ಬಟ್ಟೆ ಅದು. ಆದರೆ, ನೀವು ಅವರೇಕೋ ಕಪ್ಪು ಬಟ್ಟೆ ತಂದಿದ್ದಾರೆ ಎಂದು ಹೇಳಿದಿರಿ. ಪಾಪ ಅವರು ನಿನ್ನೆ ಅಲ್ಲಿ ಇಲ್ಲಿ . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ನಿಮ್ಮನ್ನು ಮಾತನಾಡಲು ಬಿಡುವುದಿಲ್ಲ, ಧರಣಿ ಮಾಡುತ್ತೇನೆ ಎಂದು ಹೇಳುತ್ತಿದ್ದರು. ಅದಕ್ಕಾಗಿ ಅವರನ್ನು ಕಳುಹಿಸಿಬಿಟ್ಟೆವು.

(ಸದನದಲ್ಲಿ ನಗು)

ಶ್ರೀ ಬಸವರಾಜ ರಾಯರೆಡ್ಡಿ: ವಾಟಾಳ್‌ರವರಿಗೆ ಸ್ವಲ್ಪ ವಿರಾಮದ ಅವಶ್ಯಕತೆ ಇತ್ತು. ಹಾಗಾಗಿ, ಹೊರ ಹೋದರು.

3. ಎತ್ತೀಯ ಕಾರ್ಯಕಲಾಪ:(ಮುಂದುವರೆದದ್ದು)

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಇವತ್ತು ತಾವು 25 ಬೇಡಿಕೆಗಳನ್ನು ಸಾರಾಸಗಟಾಗಿ ಮಂಡಿಸಿದ್ದೀರಿ. ಇದು ಬಹುಶಃ ಸಾಮಾನ್ಯ ವಿಷಯಗಳ ಮೇಲೆ ಆದಂಥ ಚರ್ಚೆಯಾಗುತ್ತದೆ ಎಂದು ನಾನು ಭಾವಿಸಿಕೊಂಡು, 2-3 ಇಲಾಖೆಗಳ ಮೇಲೆ ಬೆಳಕು ಚೆಲ್ಲಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಈ ರಾಜ್ಯದಲ್ಲಿ ಇವತ್ತು ಯಥೇಚ್ಛವಾಗಿ ಸಂಪತ್ಭರಿತವಾಗಿರುವಂಥ ಇಲಾಖೆಯೆಂದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ. ಈ ಇಲಾಖೆಯಲ್ಲಿ ಇಡೀ ರಾಜ್ಯದ ಸಂಪತ್ತು ಕೊಳ್ಳೆ ಹೋಗುತ್ತಿದೆ. ಈ ಶಾಸನ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಬೇಕು, ಇದಕ್ಕೆ ಏನಾದರೊಂದು ಕಡಿವಾಣ ಹಾಕಬೇಕು, ಇದನ್ನು ಏನಾದರೊಂದು ನೆಲೆಗೆ, ಒಂದು ದಿಕ್ಕಿಗೆ ತೆಗೆದುಕೊಂಡು ಹೋಗಬೇಕು